ಡಿ.ಎಸ್.ಪಂಕಜಸುಬ್ರಮಣ್ಯ, ಬೆಂಗಳೂರು

ಇಂದು ಹುಡುಗ-ಹುಡುಗಿಯರು ಹಾದಿ ತಪ್ಪಲು ಕಾರಣ?



ಆಗಾಗ್ಗೆ ಬದಲಾಗುವ ಒನ್-ವೇಗಳು.

ಹಾಡ್ಯ ಜಯಾನಂದ, ಮೈಸೂರು

ಕುಂತಿಯಂತೆ ಉದಾರಿಯಾಗಿ ಗಾಂಧಾರಿಯೂ ತನ್ನ ಮಕ್ಕಳಿಗೆ ಹಂಚಿಕೊಳ್ಳಿ ಎಂದಿದ್ದರೆ ಏನಾಗುತ್ತಿತ್ತು?

ಪಾಪ, ಆ ಹೆಣ್ಣಿಗೆ ನೂರು ಗಂಡಾಂತರಗಳು ಉಂಟಾಗುತ್ತಿದ್ದವು!

ಎಸ್.ಜಿ.ರಾಜಶೇಖರ ರೆಡ್ಡಿ, ಸಿರೇಕೊಳಂ

ಓಟು ಹಾಕಿದ ಪ್ರಜೆಗಳನ್ನು ಮರೆತು ನೆರೆಹಾವಳಿ ರಾಜಕೀಯ ಮಾಡುತ್ತಿರುವವರಿಗೆ ಒಂದೇ ಶಬ್ದದಲ್ಲಿ ಏನೆನ್ನುವಿರಿ?

ಛಿ!

ನಾರಾಯಣ, ಗುಗ್ಗರಹಟ್ಟಿ

ತುಂಬಿದ ಕೊಡ ತುಳುಕುವುದಿಲ್ಲ. ಖಾಲಿ ಕೊಡ?



ಹೊತ್ತವರ ಸೊಂಟ ಉಳುಕುವುದಿಲ್ಲ.

ಶಿವಕುಮಾರ್, ಚಿಕ್ಕಲಸಂದ್ರ

ಹಿಂದೆ ಮದುವೆ ಆದಮೇಲೆ ರಿಸೆಪ್ಷನ್, ಈಗ ರಿಸೆಪ್ಷನ್ ಆದಮೇಲೆ ಮದುವೆ; ಏಕೆ?

ಹಿಂದೆ ವಧು ಮುಖ್ಯವಾಗಿದ್ದಳು; ಈಗ ವರದಕ್ಷಿಣೆ. ಅದಕ್ಕೇ ಹೀಗೆ.

ಎಸ್.ಎನ್. ರಾಜಣ್ಣ, ಕೆರೆಕಮತ್ತಿ

ಮರಣಾನಂದ ಅಂದ್ರೆ ಏನೂಂತ ಒಂದು ಪದದಲ್ಲಿ ಉತ್ತರಿಸಬಲ್ಲಿರಾ...?

ಕು-ವೈದ್ಯವೃತ್ತಿ.

ರವಿ ಎಮ್. ಪೈ, ಕಾಸರಗೋಡ

ಪತಿರಾಯ ಗೆದ್ದರೆ ಪತ್ನಿಯ ಕೈವಾಡ, ಸೋತರೆ....?

ಪತ್ನಿಯ ತಂದೆಯೇ ಆಧಾರ.

ಗೌರಿ ಶೇಷಾದ್ರಿ, ಚಿಕ್ಕಜಾಲ

ಮನುಷ್ಯ ಕೆಟ್ಟವ ಅಥವಾ ಒಳ್ಳೆಯವನಾಗಲು ದೇವರು ಬರೆದ ಹಣೆಬರಹ ಕಾರಣವೆ?

ದೇವನೇನು ಮಾಡಿಯಾನು ಪಾಪ! ನಮ್ಮೆಲ್ಲಾ ನಿನ್ನೆಯ ಒಳಿತು, ಕೆಡಕುಗಳ ಮೊತ್ತವೇ ನಮ್ಮ ಇಂದಿನ ಹಣೆಬರಹ.

ಎಚ್.ಆನಂದಕುಮಾರ್, ಚಿತ್ರದುರ್ಗ

ಹಿಂದೆ ಅಣ್ಣ, ಅಕ್ಕ ಎನ್ನಬೇಕಾಗಿದ್ದ ಕಾಲ, ಈಗ ಅಂಕಲ್, ಆಂಟಿ ಕಾಲ. ಮುಂದೆ?

ಡ್ಯೂಡ್, ಡ್ಯೂಡೆಟ್‌ಗಳ ಕಾಲ ಆಗಲೇ ಆರಂಭವಾಗಿದೆಯಲ್ಲಾ...!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ.

ಇತ್ತೀಚೆಗೆ ಪತ್ರಿಕೆಗಳೆಲ್ಲಾ ಜಾಹಿರಾತಿಗಾಗಿ ಒಲವು ತೋರಲು ಏನು ಕಾರಣ ರಾಮ್‌ಜೀ?

ಉದರ ನಿಮಿತ್ತಂ ಬಹು ಕೃತಕ ವೇಷಂ! ಪತ್ರಿಕೆಗೆ ಜಾಹಿರಾತುಗಳೇ ಆಕ್ಸಿಜನ್.

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು.

ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ. ಗಂಡು?

ಒಲಿದರೆ ಮುದ್ದು, ಮುನಿದರೆ ಮೊದ್ದು.

ಬಾ.ರಂ.ಸುರೇಶ್, ಶಿವಮೊಗ್ಗ.

ಬಡತನಕ್ಕೂ, ಸಿರಿತನಕ್ಕೂ ಎಷ್ಟು ಅಂತರವಿದೆ ಶಿವಾ?

ಒಂದು ರೈಡ್‌ನಷ್ಟು. ರೈಡ್‌ನ ಮೊದಲು ಸಿರಿತನ, ನಂತರ ತಕ್ಷಣವೆ ಬಡತನ!

ರಘುನಾಥರಾವ್ ತಾಪ್ಸೆ, ದಾವಣಗೆರೆ

11-1-1965ರ ಸಂಕ್ರಾಂತಿಯಂದು ಹುಟ್ಟಿ, ಈಗ 45ಕ್ಕೆ ಕಾಲಿಟ್ಟ ಸುಧಾಳ ಚಿರಯೌವನದ ಗುಟ್ಟೇನು?

ನೀವೇ. ಓದುಗರ ಆರೈಕೆ, ಹಾರೈಕೆಯಿಂದಲೇ ಈಕೆ ಚಿರಯೌವನೆ.

ಜೆ.ಆರ್ ಆದಿನಾರಾಯಣಮುನಿ, ಬೆಂಗಳೂರು

ಬದುಕಿಗೆ ನಿಜವಾದ ಆಸರೆ ಯಾವುದು?

ಉಸಿರು, ಮಾವನ ಆಸ್ತಿ.

## ಬಹುಮಾನಿತ ಪ್ರಶ್ನೆ

ಭುವನೇಶ್ವರಿ, 10ನೇ ತರಗತಿ, ಕೊರಟಗೆರೆ

ಸೂರ್ಯನ ಬೆಳಕು ಮಾನವನ ದೇಹದ ಯಾವ ಭಾಗಕ್ಕೆ ಮೊದಲು ತಗಲುತ್ತದೆ?

ರಗ್‌ನಿಂದ ಯಾವ ಭಾಗ ಆಚೆ ಇಣುಕಿರುತ್ತದೋ ಆ ಭಾಗದ ಮೇಲೆ.

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ

ಕಾಗೆ ಕೂಡುವುದಕ್ಕೂ, ಟೊಂಗೆ ಮುರಿಯುವುದಕ್ಕೂ ಈ ಮಾತನ್ನು ರಾಜಕೀಯಕ್ಕೆ ಹೋಲಿಸಿದರೆ?

ನೆರೆ ಬರುವುದಕ್ಕೂ, ಶೆಟ್ಟರ್ ಏಳುವುದಕ್ಕೂ...

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ

ಹೆಣ್ಣುಮಕ್ಕಳು ಗಂಡು ಹೆತ್ತರೆ ಖುಷಿ ಪಡುವ ಸಮಾಜ ಅದೇ ಎಮ್ಮೆ ಗಂಡು ಕರುವಿಗೆ ಜನ್ಮವಿತ್ತರೆ ದುಃಖಪಡುವುದೇಕೆ?

ಏಕೆಂದರೆ ಅದು ಕೋಣ, ಈ ಮಗುವಾದರೋ ಜಾಣ ಎಂದಿತೊಂದು ಅಜ್ಜಿ.

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.

ಮದುವೆ ಸಮಯದಲ್ಲಿ ವಧುವಿನ ತಾಯಿ- ತಂದೆ ವರನ ಪಾದಗಳನ್ನು ತೊಳೆಯುವ ಉದ್ದೇಶವೇನು?

ಅವನು ಅದುವರೆಗೂ ತುಳಿದಿದ್ದ ಕೆಸರು ಮನೆಗೂ, ಮಗಳಿಗೂ ತಾಕದಿರಲೆಂದು.

ಹಮೀದ್, ವಿಟ್ಲ

ಆಫೀಸಿನಲ್ಲಿ ತುಂಬಾ ಸಲಿಗೆಯಿಂದ ವರ್ತಿಸುವ ಹುಡುಗಿಯರು ರಸ್ತೆಯಲ್ಲಿ ಅಪರಿಚಿತರಂತೆ ವರ್ತಿಸುತ್ತಾರೇಕೆ?

ಅದಕ್ಕೆ ನೀವೇ ಕಾರಣವಂತೆ. ಅಲ್ಲಿ ಸಲಿಗೆ ತೋರಿದರೆ ಕೆಲಸ ಮಾಡಿಕೊಡುವ ನೀವು ಇಲ್ಲಿ ಪಾರ್ಕ್‌ಗೆ ಕರೆಯುವಿರಂತೇ...!?

ನರಸಿಂಹ ಎಂ. ಪೈ, ಹೊನ್ನಾವರ

ಹಾಸ್ಯ ಧಾರಾವಾಹಿಗಳೇ ಜನಪ್ರಿಯವಾಗಿದ್ದರೂ ಗೋಳು ಧಾರಾವಾಹಿಗಳು ವರ್ಷಾನುಗಟ್ಟಲೆ ಓಡಲು ಕಾರಣ?



ನಿಲ್ಲದಿರುವುದೇ ಓಡುತ್ತಿರುವುದಕ್ಕೆ ಕಾರಣ.

■ ರಾಮ್